# <u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>

ಸಿ.ಸಿ. ನಂ.1/2024
ಪಿ.ಡಬ್ಲ್ಯೂಃ3
ಸಿ.ಡಬ್ಲ್ಯೂಃ 3

ಸಾಕ್ಷಿದಾರರ ಹೆಸರು : ಲಾದ್ರು ಪರ್ನಾಂಡಿಸ್

ತಂದೆಯ ಹೆಸರು : ಮೆಥಿವಸ್ ಪರ್ನಾಂಡಿಸ

ವಯಸ್ಸು : 53 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸ : ಸಂಕುಸಾಳ , ಅಂಕೋಲಾ

ದಿನಾಂಕಃ 21-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ</u> ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1 ನನಗೆ ಕನ್ನ ಡ ಓದಲು ಬರೆಯಲು ಬರುವುದಿಲ್ಲ . ನಾನು ವಿದ್ಯಾಭ್ಯಾಸ ಕಲಿಯಲಿಲ್ಲ . ನನಗೆ ಚಾಸಾ -4 ರವರ ಪರಿಚಯ ಇರುತ್ತದೆ ಅವರು ನಮ್ಮ ಊರಿನವರು . ಅವರು ಈಗ ಊರಲ್ಲಿ ಇಲ್ಲ . 2 ವರ್ಷದಿಂದ ಹೊರಗಡೆ ಇರುತ್ತಾರೆ . ನನಗೆ ಚಾಸಾ 1 ರವರ ಪರಿಚಯ ಇರುತ್ತದೆ ಅವರು forest officer .1 ರಿಂದ 3 ನನೇ ಅರೋಪಿತರ ಪರಿಚಯ ಇರುತ್ತದೆ ನ್ಯಾಯಾಲಯದ ಮುಂದೆ ಇರುವ 3 ಜನ ಆರೊಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ಸಾಕ್ಷಿ ಗೆ ಈಗಾಗಲೆ ಗುರತಿಸಲಾಗಿರುವ ನಿಪಿ-2 ನ್ನು ತೋರಿಸಲಾಗಿದ್ದು ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುವುರಿಂದ ನಿಪಿ-2 (ಸಿ) ಎಂದು ಗುರುತಿಸಲಾಯಿತು . ಈ ಸಹಿಯನ್ನು ಸುಂಕಸಾಳ ದಲ್ಲಿ ಗ್ರಾಮ ಪಂಚಯಾತಿ ಸಮೀಪ ಚಾಸಾ 1 ರವರು ಕರೆದು ಒಂದು ಸಹಿ ಹಾಕು ಎಂದು ಹೇಳಿದ ಕಾರಣ ನಾನು ಸಹಿ ಹಾಕಿರುತ್ತೇನೆ . ಯಾವ ವಿಷಯಕ್ಕಾಗಿ ನಾನು ಸಹಿ ಹಾಕಿರುತ್ತೇನೆ ಎಂದು ನನಗೆ ಗೊತ್ತಿಲ್ಲ . ಸುಮಾರು 5-6 ವರ್ಷಗಳ ಹಿಂದೆ ನಾನು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ . ನಿರ್ದಿಷ್ಟವಾಗಿ ದಿನಾಂಕ ತಿಂಗಳು ,ವರ್ಷ ನೆನಪಿಲ್ಲ. ನನಗೆ ಯಾವುದಾದರೂ ವಸ್ತು ತೋರಿಸುವುದಾಗಲಿ

ಜಪ್ತು ಪಡಿಸುವುದಾಗಲಿ ನನ್ನ ಮುಂದೆ ಅರಣ್ಯ ಅಧಿಕಾರಿಗಳು ಮಾಡಿರುವುದಿಲ್ಲ . ಅರಣ್ಯಾಧಿಕಾರಿಗಳು ಮತ್ತೇನು ಮಾಡಿಲ್ಲ ಸಾಕ್ಷಿಗೆ ಈಗಾಗಲೇ ಗುರುತಿಸಲಾಗಿರುವ ನಿಪಿ–6 ರ 2 ನೇ ಪೋಟೊನ್ನು ತೋರಿಸಲಾಗಿದ್ದು ಸಾಕ್ಷಿ ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಆದರೆ ಯಾವ ಕಾರಣಕ್ಕಾಗಿ ಆ ಪೋಟೊ ತೆಗೆದಿರುತ್ತಾರೆ ಎಂದು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ . ಪೋಟೊ ಹೊಡೆದಿರುವ ಜಾಗ ಯಾವುದು ಎಂದು ನನಗೆ ಈಗ ನೆನಪಿಲ್ಲ . ಸಾಕ್ಷಿಗೆ ಪುರವಣಿ ಪಂಚನಾಮೆಯನ್ನು ತೋರಿಸಲಾಗಿದ್ದು ಅದರಲ್ಲಿರುವ ತನ್ನ ಸಹಿ ಗುರುತಿಸಲಾಗಿದ್ದು ನಿಪಿ–7 ಎಂದು ಸಾಕ್ಷಿ ಸಹಿಯನ್ನು ನಿಪಿ–7 (ಎ) ಎಂದು ಗುರುತಿಸಲಾಯಿತು . ನಿಪಿ–7 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ . ಯಾವ ಕಾರಣಕ್ಕಾಗಿ ನನ್ನ ಸಹಿ ಪಡೆದಿರುತ್ತಾರೆ ಎಂದು ಗೊತ್ತಿಲ್ಲ . ಯಾವ ದಿನಾಂಕ, ತಿಂಗಳು ,ವರ್ಷ ದಂದು ನನ್ನ ಸಹಿ ಪಡೆದಿರುತ್ತಾರೆ ಎಂದು ಗೊತ್ತಿಲ್ಲ .

2. ಸಾಕ್ಷಿಗೆ ವಾಹನ ಜಪ್ತು ಪಂಚನಾಮೆ ತೋರಿಸಲಾಗಿದ್ದು ಸಾಕ್ಷಿಯ ಅದರಲ್ಲಿರುವ ಸಹಿ ನೋಡಿ ಗುರುತಿಸಿರುವುರಿಂದ ನಿಪಿ–8 ಎದು ಸಾಕ್ಷಿ ಸಹಿ ಯನ್ನು ನಿಪಿ–8 ಎ ಎಂದು ಗುರುತಿಸಲಾಯಿತು. ಸದಿರ ಜಪ್ತು ಪಂಚನಾಮೆಯಲ್ಲಿ ಏನೆಲ್ಲಾ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಯಾವ ವಿಷಯಕ್ಕೆ ಸಂಬಂಧಿಸಿದಂತೆ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ .ಸಾಕ್ಷಿಗೆ 4 ಪೋಟೊಗಳನ್ನು ಹಾಗೂ ಸಿಡಿಯನ್ನು ತೋರಿಸಲಾಗಿದ್ದು ಅದರಲ್ಲಿ ಸಾಕ್ಷಿ ತಾನು ಇರುವುದನ್ನು ನೋಡಿ ಗುರುತಿಸಿರುವುರಿಂದ 4 ಪೋಟೊಗಳನ್ನು ಒಟ್ಟಾರೆಯಾಗಿ ನಿಪಿ–9 ಎಂದು, ಸಿಡಿಯನ್ನು ನಿಪಿ–9 (ಎ) ಎಂದು ಗುರುತಿಸಲಾಯಿತು . ಆ ಪೋಟೊನ್ನು ಯಾವ ವಿಷಯಕ್ಕೆ ತೆಗೆಯುತ್ತಿದ್ದಾರೆ ನನ ಬಳಿ ಹೇಳಿಲ್ಲ . ನನ್ನ ಸಮಕ್ಷಮ ದಲ್ಲಿ ವಾಹನ ಜಪ್ತು ಪಡಿಸಿದ್ದಾಗಲಿ ಪಂಚನಾಮೆ ಬರೆದ್ದು ಆಗಲಿ ಇಲ್ಲ .

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೇಳಿದ್ದು ನೀಡಲಾಗಿದೆ.)**

**ಪಾಟೀ ಸವಾಲುಃ ಸ .ಸ. ಆ ರವರಿಂದ ಃ**

3. ಆರೊಪಿ 1 ಮತ್ತು 2 ರವರು ನಿಮ್ಮ ಅಕ್ಕಪಕ್ಕ ದ ಊರಿನವರು ಹಾಗೂ 3 ನೆ ಆರೋಪಿ ನಿಮ್ಮ ಸ್ವಂತ ಊರಿನವರು ಎಂದರೆ ಸರಿ . 3 ನೆ ಅರೋಪಿತನಿಗೆ 1 ಮತ್ತು 2 ನೆ ಆರೋಪಿತರು ಪರಿಚಯಸ್ಥರು ಮುತ್ತು ಸ್ನೇಹಿತರು ಎಂದರೆ ನನಗೆ ಗೊತ್ತಿಲ್ಲ . 2 ನೆ ಅರೋಪಿಯು ನಿಮ್ಮ ಸಮಾಜದವರು ಮತ್ತು ಪರಿಯಚಯಸ್ಥರು ಎಂದರೆ ಅವರು ನಮ್ಮ ಸಮಾಜದವರು ಹೌದು ಆದರೆ ಪರಿಚಯಸ್ಥರು ಅಲ್ಲ . 2 ನೇ ಆರೋಪಿತರು ನಿಮ್ಮ ಸಮಾಜದವರು ಹಾಗೂ ಪರಿಚಯಸ್ಥರು ಆಗಿದ್ದರೂ ಸಹ ಪರಿಚಯಸ್ಥರು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ನೀವು ಮತ್ತು ಚಾಸಾ 4 ರವರು ಅರಣ್ಯ ಇಲಾಖೆಯಲ್ಲಿ ದಿನಗೂಲಿ ಕೆಲಸಕ್ಕೆ ಹೋಗುತ್ತೇವೆ ಎಂದರೆ ಸರಿ . ದಿಃ03-09-2019 ರಂದು ನಿಮ್ಮನ್ನು ಹಾಗೂ ಚಾಸಾ 4 ರವನ್ನು ಸದ್ರಿ ಪಂಚನಾಮೆ ಮಾಡುವ ಸ್ಥಳಕ್ಕೆ ಕರೆದುಕೊಂಡು ಹೋಗಿ ವಿಷಯ ತಿಳಿಸಿ ಸ್ಥಳ ಮಹಜರ ವನ್ನು ನಿಮ್ಮ ನಿಮ್ಮ ಸಮಕ್ಷಮ ದಲ್ಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ ಆ ಪಂಚನಾಮೆ ಕಾಲಕ್ಕೆ 5.2 ಕೆಜಿ ಕಾಡು ಕುರಿ ಮಾಂಸ , ಒಂದುಚೀಲ , 2 ಬಂದೂಕಿನ ಕ್ರಾಟೆಜ್ 8 ಬಂದೂಕಿನ ಕ್ರಾಟೆಜ್ ಚೇರಿ (ಖಾಲಿ ) , ಸಜೀವ ತುಂಬಿದ್ದು 2 , ನೋಕಿಯಾ ಕಂಪನಿಯ 3310 ಒಂದು ಕೀ ಪೆಡ್ ಮೊಬೈಲ್ , ಲಾವಾ A-1 ಬ್ಲಾಕ ಸದ್ರಿ ವಸ್ತುಗಳನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . ಸದ್ರಿ ವಸ್ತು ಗಳನು ನಮ್ಮ ಮುಂದೆ ಜಪ್ತು ಪಡಿಸಿದ್ದರು ಜಪ್ತು ಪಡಿಸಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸದ್ರಿ ಪಂಚನಾಮೆ ಸಂಧರ್ಬ ದಲ್ಲಿ ಪಂಚನಾವೆ ಜರುಗಿದೆ ಎಂದು ತೋರಿಸಲು ನಿಪಿ-3 ರಿಂದ 6 ರಂತೆ ಪೊಟೊ ತೆಗೆದಿರುತ್ತಾರೆ ಎಂದರೆ ಸರಿಯಲ್ಲ . ಸದ್ರಿ ಕಾಡು ಕುರಿ ಕೊಂದ ಬಗ್ಗೆ ಹೇಳಿದ ಸ್ಥಳವನ್ನು ಪಂಚನಾಮೆ ಸಮಯದಲ್ಲಿ ನಿಮ್ಮನ್ನು ಕರೆದು ಕೊಂಡು ಹೋಗಿ ಸ್ಥಳ ಪಂಚನಾವೆ ಮಾಡಿ ಅದನ್ನು ಪಂಚನಾಮೆ ಎಂದು ನಮೂದಿಸಿ ಸದಿರ ಸ್ಥಳದಲಿಲ ಈ ಪೊಟೊ ತೆಗೆದಿರುತಾರೆ ಎಂರೆ ಸರಿಯಲ್ಲ .

4. ದಿಃ 5-11-2019 ರಂದು ಅಂಕೋಲಾ ತಾಲೂಕಿನ ಮಾಸ್ತಿಕಟ್ಟಾ ವಲಯ ಕಚೇರಿ ಅವರಣದಲ್ಲಿ ಸದ್ರಿ ಪ್ರಕರಣ ದಲ್ಲಿ ಜಪ್ತು ಪಡಿಸಿದ ಮಾಂಸವನ್ನು ಮಾನ್ಯ ನ್ಯಾಯಾಲಯದ ಅದೇಶದ ಮೇರೆಗೆ ಅದನ್ನು ಸುಟುಟ ನಾಶ ಪಡಿಸಿದ ಸಂದರ್ಬದಲ್ಲಿ ಪುರವಣಿ ಪಂಚನಾಮೆ ಬರೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ

ಸರಿಯಲ್ಲ . ಸದ್ರಿ ಮಾಂಸವನ್ನು ನನ್ನ ಸಮಕ್ಷಮ ಸಂಜೆ 4 ರಿಂದ 6 ಗಂಟೆ ವರೆಗೆ ಸುಟ್ಟು ದಹನ ಮಾಡಿ ಪುರವಣಿ ಪಂಚನಾಮೆ ಮಾಡಿ ಬರೆದು ತಯಾರಿಸಿರುತ್ತಾರೆ ಎಂದರೆ ಗೊತ್ತಿಲ್ಲ .

5. ದಿಃ 9-10-2024 ರಂದು ಮಾನ್ಯ ನ್ಯಾಯಾಲಯದ ಅದೇಶದ ಮೇರೆಗೆ ಸದ್ರಿ ಪ್ರಕರಣ ದಲ್ಲಿ ಜಪ್ತು ಪಡಿಸಿಕೊಂಡ ಸ್ಕಾರ್ಪಿಯೋ ವಾಹನ ಕೆಎ-31 ಎಮ್ 4023 ವಾಹನವನ್ನು ಬಿಡುಗಡೆ ಮಾಡುವ ಸಮಯದಲ್ಲಿ ನಾನು ಪಂಚನಾಗಿ ಹಾಜರಿದ್ದು ಪಂಚನಾಮೆ ಕ್ರಮ ಜರುಗಿಸಿ ಫೋಟೊ ತೆಗೆದು ಸದ್ರಿ ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ನನಗೆ ಯಾವ ವಿಷಯಕ್ಕೆ ತಿಳಿದಿರುವುದಿಲ್ಲ ಸದ್ರಿ ಪಂಚನಾಮೆ ನಿಪಿ-8 ಅಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . ನಿಪಿ-8 ನ್ನು ಬರೆಯುವ ಸಮಯದಲ್ಲಿ ನಿಪಿ-9 ರಂತೆ ಫೋಟೊ ತೆಗೆದಿರುತ್ತಾರೆ ಎಂದರೆ ಸರಿಯಲ್ಲ . ನಿಪಿ-2 ,7 ,8 ರಲ್ಲಿ ಬರೆದಿರುವ ಬಗ್ಗೆ ವಿಚಾರ ಮತ್ತು ಸ್ಪಷ್ಟ ಸಂಪೂರ್ಣ ಮಾಹಿತಿ ಇದ್ದರೂ ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಎಲ್ಲಾ ಫೋಟೊ ಗಳನ್ನು ಯಾವ ವಿಚಾರಕ್ಕೆ ಯಾವ ದಿನಾಂಕ ಎಲ್ಲಿ ತೆಗೆದಿರುತ್ತಾರೆ ಎಂದು ನನಗೆ ಸಂಪೂರ್ಣ ಮಾಹಿತಿ ಇದ್ದರೂ ಮಾಹಿತಿ ಇಲ್ಲ ಎಂದು ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ . 3 ನೇ ಅರೋಪಿ ನನ್ನ ಊರಿನವರಾಗಿದ್ದ ಕಾರಣ ಅವರಿಗೆ ಸಹಾಯವಾಗಲು ಎಂದು ನಿಪಿ-2,7 ಮತ್ತು 8 ರಲ್ಲಿ ಬರೆದಿರುವ ವಿಚಾರಗಳ ಬಗ್ಗೆ ಸದ್ರಿ ಫೋಟೊ ಗಳ ಬಗ್ಗೆ ಮಾಹಿತಿ ಇದ್ದರೂ ಮಾಹಿತಿ ಇಲ್ಲ ಎಂದು ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ . ಅರೊಪಿತರಿಗೆ ಸಹಾಯವಾಗಲೆಂದು ಅರೋಪಿತರಿಗೆ ಸಹಾಯವಾಗುವ ರೀತಿಯಲ್ಲಿ ಸುಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲು ಃ ಅರೋತಪಿರ ಪರ ಎಸ್ ಆ ರ್ ಎನ್ ವಕೀಲರಿಂದ

6. ಸುಂಕಾಸಾಳ ಗ್ರಾಮದಲ್ಲಿ ಮಾಂಸ ತಿನ್ನುವಂತಹ ಹಿಂದೂ ಮುಸ್ಲಿಮ್ ಹಾಗೂ ಕ್ರಿಶ್ಚಿಯನ ಸಮುದಾಯದ ಸಾಕಷ್ಟು ಜನರು ಇರುತ್ತಾರೆ ಎಂದರೆ ಸರಿ . ಹಾಗಾಗಿ ನಿಮ್ಮ ಸುಂಕಾಸಾಳ ಗ್ರಾಮದಲ್ಲಿ ಮಾಂಸದ ಅಂಗಡಿಗಳು ಅಂದರೆ ಕೋಳಿ ಮತ್ತು ಕುರಿಯ ಮಾಂಸದ ಅಂಗಡಿಗಳು ಇವೆ ಎಂದರೆ ಸರಿ . ಅದೇ ರೀತಿ ನಿಮ್ಮ ಊರಿನಲ್ಲಿ ಹೈವೆ ಪಕ್ಕದಲ್ಲಿ ರೆಲ್ವೆ ಇಲಾಖೆಯ ಸಿಬ್ಬಂದಿಯ ವಸತಿ ಗೃಹಗಳು ಇವೆ ಎಂದರೆ ಸರಿ . ಅದೇ ರೀತಿ ರಸ್ತೆಯ ಅಕ್ಕಪಕ್ಕದಲ್ಲಿ ವಾಸ ಮಾಡುವಂತಹ ಮನೆಗಳು ಅಂಗಡಿಗಳು ಸಾಕಷ್ಟು ಇವೆ ಎಂದರೆ ಸರಿ . ನೀವು

ಕೂಲಿ ಕೆಲಸ ಮಾಡುತ್ತಿರುವುದರಿಂದ ಅರಣ್ಯ ಇಲಾಖೆಯವರು ಪಂಚಾಯತರವರು ಸಾಕಷ್ಟು ಸಲ ಕರೆಯುತ್ತಿರುತ್ತಾರೆ ಎಂದರೆ ಸರಿ . ಆ ಕೆಲಸ ಮಾಡಿದ್ದಕ್ಕೆ ಅವರು ದಿನಗೂಲಿ ಕೊಡುತ್ತಾರೆ ಮತ್ತು ಅವರು ಕರೆದಾಗಲೆಲ್ಲಾ ನೀವು ಹೋಗಬೇಕಾಗುತ್ತದೆ ಎಂದರೆ ಸರಿ . ನಿಪಿ-2,7 ಮತ್ತು 8 ಬಗ್ಗೆ ನಿಮಗೆ ವೈಯಕ್ತಿಕವಾಗಿ ಯಾರು ಎಲ್ಲಿ ಬರೆದರು ಎಂದು ಮಾಹಿತಿ ಇಲ್ಲ ಎಂರೆ ಸರಿ . ನಿಮ್ಮನ್ನು ಕೂಲಿ ಕೆಲಸಕ್ಕೆ ಅವರುಗಳು ಕರೆದಾಗ ನಿಮ್ಮ ಸಹಿಯನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ . ಅದೇ ರೀತಿ ಮುಂದೆಯಾ ಸಹ ಅವರು ಕೆಲಸವನ್ನು ಕೊಡಬಹುದು ಎಂಬ ವಿಚಾರದಿಂದ ಅರಣ್ಯ ಇಲಾಖೆಯವರು ಹೇಳಿದ್ದನ್ನು ನೀವು ಪಾಲಿಸಬೇಕಾಗುತ್ತದೆ ಎಂದರೆ ಸರಿ . ಈ ಪ್ರಕರಣದಲ್ಲಿ ಸಹ ಅರಣ್ಯ ಇಲಾಖೆಯವರು ಒಂದು ಸಹಿ ಮಾಡು ಎಂದು ಹೇಳಿದ ಕಾರಣ ನೀವು ಸಹಿ ಮಾಡಿರುತ್ತಿರಿ ಹೊರತು ಬಾಕಿ ಯಾವ ವಿಷಯ ನಿಮಗೆ ಗೂತಿಲ್ಲ ಎಂದರೆ ಸರಿ . ನಿಪಿ-9 ರಲ್ಲಿ ಕಾಣಸಿದಂತಹ ಪೊಟೊ ದಂತೆ ನೀವು ಕೂಲಿ ಕೆಲಸಕ್ಕೆ ಹೋದಾಗ ಕೂಲಿ ಕಾರ್ಮಿಕರ ಲೆಕ್ಕಾಚಾರ ಮೇಲಾಧಿಕಾರಿಗೆ ಕೊಡಲು ಆಗಲೂ ಸಹ ನಿಮ್ಮ ಪೊಟೂ ತೆಗೆದು ಕೊಳ್ಳುತ್ತಾರೆ ಎಂದರೆ ಸರಿ . ಕೂಲಿ ಲೆಕ್ಕಾಚಾರದ ಪೊಟೊ ತೆಗೆದದ್ದನ್ನು ಬಿಟ್ಟರೆ ಬೇರೆ ಯಾವುದೇ ಪೊಟೊನ್ನು ಅವರು ತೆಗೆದದ್ದು ಇಲ್ಲ ಎಂದರೆ ಸರಿ . ಕಪ್ಪು ಬಣ್ಣದ ಸ್ಕಾರ್ಪಿಯೋ ವಾಹನ ಸಂಖ್ಯೆ ಕೆಎ-31 ಎಮ್ 4023 ವಾಹನ್ನು ನಿಮ್ಮ ಸಮಕ್ಷಮ ಜಪ್ತು ಪಡಿಸಿಕೊಂಡಿರುತಾರೆ ಎಂದರೆ ಸರಿಯಲ್ಲ

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.